# ಗಾಯಕ್ವಾಡ್ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

**ಬೆಂಗಳೂರು:** ಲೇಖಕ ಡಾ. ವಿಠಲ್ ರಾವ್ ಟಿ. ಗಾಯಕ್ವಾಡ್ ಅವರ 'ದಲಿತ ಸಾಹಿತ್ಯದ ಸೌಂದರ್ಯ ಪ್ರಜ್ಞೆ' ಅನುವಾದಿತ ಕೃತಿ 2019ನೇ ಸಾಲಿನ 'ಕೇಂದ್ರ ಸಾಹಿತ್ಯ ಅಕಾಡೆಮಿ' ಪ್ರಶಸ್ತಿಗೆ ಭಾಜನವಾಗಿದೆ.



ಇದು, ಮರಾಠಿ ಲೇಖಕ ಶರಣ್ ಕುಮಾರ್ ಲಿಂಬಾಳೆ ಅವರ 'ದಲಿತ್ ಸಾಹಿತ್ಯಾಚೆ ಸೌಂದರ್ಯ ಶಾಸ್ತ್ರ' ಎಂಬ ಮೂಲ ಕೃತಿಯ ಅನುವಾದವಾಗಿದೆ. ಲೇಖಕರಾದ ಡಾ. ಆರ್. ಪೂರ್ಣಿಮಾ, ಎಸ್. ದಿವಾಕರ್ ಹಾಗೂ ಡಾ. ಅರವಿಂದ್ ಮಾಲಗತ್ತಿ ನೇತೃತ್ವದ ಸಮಿತಿ ಈ ಕೃತಿಯನ್ನು ಪ್ರಶಸ್ತಿಗೆ ಆಯ್ಕೆ ಮಾಡಿದೆ. ಪ್ರಶಸ್ತಿಯು 50 ಸಾವಿರ ರೂ., ನಗದು ಹಾಗೂ ತಾಮ್ರ ಫಲಕವನ್ನೊಳಗೊಂಡಿದ್ದು, ಈ ವರ್ಷ ಅಂತ್ಯದ ವೇಳೆಗೆ ಪ್ರದಾನ ಮಾಡಲಾಗುತ್ತದೆ.

